# ‘ರೈತ ತೀರ್ಪು’ ಲೋಕಾರ್ಪಣೆ

VISAYA KARNATAKA 6/11

■ ವಿಕ ಸುದ್ದಿಲೋಕ ಮೈಸೂರು

ಕೃಷಿ ಸಂಶೋಧನೆಯ ಪ್ರಜಾ ತಾಂತ್ರೀಕರಣಕ್ಕಾಗಿ ದಕ್ಷಿಣ ಏಷ್ಯಾ ಒಕ್ಕೂಟ (ಆದರ್ಶ) ದಿಂದ ನಡೆದ ‘ರೈತ ತೀರ್ಪು’ ಕೃಷಿ ಸಂಶೋಧನೆಯನ್ನು ಪುಸ್ತಕ ರೂಪದಲ್ಲಿ ಬಿಡುಗಡೆ ಮಾಡಲಾಯಿತು.

ಸಮಿತಿಯ ಸಂಚಾಲನ ಸಮಿತಿ ಸದಸ್ಯರೂ ಆದ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಹಾಗೂ ಸಾವಯವ ಕೃಷಿಕ ಸಂತೋಷ್ ಕೌಲಗಿ ಅವರು ಪುಸ್ತಕ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಕುರುಬೂರು ಶಾಂತಕುಮಾರ್, ಇದು ವಿಶ್ವದಲ್ಲಿಯೇ ಮೊದಲ ಪ್ರಯತ್ನವಾಗಿದ್ದು, ಸಣ್ಣ ಮತ್ತು ಸಾಮಾನ್ಯ ರೈತರಿಗೆ ‘ರೈತ ತೀರ್ಪು’ ಐತಿಹಾಸಿಕವಾಗಿದೆ. ಇದರಲ್ಲಿ ಎಲ್ಲ ವರ್ಗದವರು ಭಾಗವಹಿಸಿದ್ದರು. ಇದು ಮುಂದೆ ರೈತರಿಗೆ ದಿಕ್ಸೂಚಿಯಾಗಲಿದೆ ಎಂದರು.

ಆದರ್ಶ ದಕ್ಷಿಣ ಏಷ್ಯಾ ಸಂಚಾಲಕ ಪಿ.ವಿ.ಸತೀಶ್, ಕೆ.ಎನ್. ರಾಮಚಂದ್ರ ಮಾತನಾಡಿದರು.